ಕಾಣುವುದಿಲ್ಲ. ಆದರೆ ಬೈಗುಬೆಳಗಿನಲ್ಲಿ ಸೂರ್ಯ ಕೊಡುವ ಹೊಂಬಣ್ಣ ಹಚ್ಚಿಕೊಂಡು ಹೋಳಿಯಾಟ ಶುರು ಮಾಡುತ್ತವೆ. ಜಗವೆಲ್ಲ ಮಲಗಿರಲು ತಾವಷ್ಟೇ ಎದ್ದಂತೆ, ಸಮಸ್ತ ಕಣಿವೆನಾಡು ಕತ್ತಲಲ್ಲಿ ಮುಳುಗಿರುವಾಗ, ಕೆಂಬೆಳಕಿನಲ್ಲಿ ಬೆಳಗುತ್ತವೆ. ಯಮುನೋತ್ರಿ ಮತ್ತು ಕೇದಾರನಾಥದಲ್ಲಿ ಈ ಬಣ್ಣದಾಟವು ಭವ್ಯವಾಗಿ ಕಾಣುವುದು. ಕೇದಾರನಾಥದಲ್ಲಿ ಕೆತ್ತಿಟ್ಟ ವಜ್ರದಂತಿರುವ ಒಂದು ಶಿಖರಕ್ಕೆ ಸೂರ್ಯೋದಯದಲ್ಲಿ ತುದಿಗಷ್ಟೆ ಹೊನ್ನರಶ್ಮಿ ಬಿದ್ದು ಹಿಮಕ್ಕೆ ಬೆಂಕಿಹತ್ತಿತೊ, ಸಿಡಿಲೊಂದು ಬಂದು ಮಲಗಿತೊ ಎಂಬಂತೆ ತೋರುತ್ತದೆ. ನಗರೋಣಿ ಪರ್ವತದ ತುದಿಯಿಂದ ಸರ್‌ಪಾಸ್ ಹಿಮಶಿಖರಗಳನ್ನು ನೋಡುವುಕ್ಕಾಗಿ ನಾವು ಬೆಳಗಿನ ಜಾವವೇ ಎದ್ದು, ಅರೆಗತ್ತಲೆಯಲ್ಲಿ ತಡವುತ್ತ, ಹಿಮಕರಡಿಗಳ ಭಯಕ್ಕೆ ಗಟ್ಟಿಯಾಗಿ ಹಾಡುತ್ತ, ಜನವಿಹೀನತೆಯೂ ಕಡುಮೌನವೂ ತುಂಬಿದ ಕಣಿವೆಯಲ್ಲಿ, ಕೊರೆವ ಚಳಿಯಲ್ಲಿ ನಡುಗುತ್ತ ಸೂರ್ಯೋದಯದ ಹೊತ್ತಿಗೆ ಒಂದು ಪರ್ವತದ ತುದಿಗೇರಿದೆವು. ಅಲ್ಲಿಂದ ಮೂವತ್ತು ಮೈಲಿ ದೂರದಲ್ಲಿ ಪರ್ವತಮಾಲೆಯೊಂದು ಅಲೆಅಲೆಯಾಗಿ ಹಬ್ಬಿ ಸೂರ್ಯಸ್ನಾನ ಮಾಡುತ್ತ ನಿಂತಿರುವ ಅಪೂರ್ವ ದೃಶ್ಯ ಕಾಣುತ್ತದೆ.

ಹಿಮದ ಜತೆ ಶಿಖರಗಳು ಆಡುವ ಆಟವು, ಉತ್ತರಕಾಶಿ ಜಿಲ್ಲೆಯ ತಲೋಟಿಯಲ್ಲಿ ಬೇರೆ ತರಹ ಇದೆ. ಮೂರು ದಿಕ್ಕಿನಿಂದಲೂ ಕೋಟೆಕಟ್ಟಿದಂತೆ ಹಿಮಪರ್ವತಗಳು ತೆಕ್ಕೆಬಿದ್ದಿರುವ ಚೆಲುವಾದ ಕಣಿವೆಯಲ್ಲಿ ನಮ್ಮ ಕ್ಯಾಂಪಿತ್ತು. ಸಂಜೆ ಎದುರಿದ್ದ ಪರ್ವತಗಳ ಮೇಲೆ ಇದ್ದಕ್ಕಿದ್ದಂತೆ ಮಂಜು ಮುಸುಕಿದಂತೆ ತೋರಿತು. ವಾಸ್ತವದಲ್ಲಿ ಅದು ಹಿಮಪಾತ. ವಾತಾವರಣ ತಿಳಿಯಾದ ಬಳಿಕ ಕಂದುಬಣ್ಣದ ಕಲ್ಲಿನ ಶಿಖರಗಳು ಭಸ್ಮಸ್ನಾನ ಮಾಡಿದಂತೆ ಸರ್ವಾಂಗದಲ್ಲೂ ಬಿಳುಪು ತೊಟ್ಟಿದ್ದವು. ಪರ್ವತದ ಚೂಪಾದ ಕಪ್ಪನೆಯ ಕೋಡುಗಳು ಹಿಮದವಕುಂಠನ ಹೊದ್ದಂತೆ ಮಂಜಿನಲ್ಲಿ ಮರೆಯಾಗುವುದು, ಹಿಮಕರಗಿ ಮರಳಿ ಮೂಲ ಪಾಶಾಣಕ್ಕೆ ಬರುವುದು – ಎಷ್ಟು ಸಹಸ್ರಮಾನಗಳಿಂದ ಆಡುತ್ತಿರುವ ನಾಟಕ?

ಹಿಮಾಚ್ಛಾದಿತ ಪರ್ವತಗಳ ಚೆಲುವನ್ನು, ನೋಡುವ ಜಾಗವೂ ನಿರ್ಧರಿಸುತ್ತದೆ. ಕುಲು ಕಣಿವೆಯಲ್ಲಿರುವ ಬಿಜಲಿ ಮಹಾದೇವ ಪರ್ವತದ ಶಿಖರದಿಂದ ಕುಲುವಿನ ಪಾರ್ವತಿ ಕಣಿವೆಯ ಚೆಲುವನ್ನು ನೋಡಬೇಕು. ಇಲ್ಲಿಂದ ಚಂದ್ರಖಾನಿ, ಸರ್‌ಪಾಸ್, ರೋಹತಾಂಗ್ ಮೊದಲಾಗಿ ಹಿಮಪರ್ವತಗಳ ಸರಣಿ ಗೋಚರಿಸುತ್ತದೆ. ಇನ್ನೊಂದು ದಿಕ್ಕಿಗೆ ಪಾರ್ವತಿ ಹೊಳೆ ಬಿಯಾಸನ್ನು ಕೂಡುವ ಸಂಗಮ ಕಾಣುತ್ತದೆ. ಗಂಗೋತ್ರಿ ಯಮುನೋತ್ರಿಗಳಿಂದಲೂ ಹಿಮಶಿಖರಗಳು, ತಾವೇ ಹುಟ್ಟಿಸಿ ಕಳಿಸಿದ ನದಿಯ ನೀರಲ್ಲಿ ಪ್ರತಿಫಲಿಸುತ್ತವೆ. ರೋಹತಾಂಗ್ ಪಾಸಿನಲ್ಲಿ ಎತ್ತ ತಿರುಗಿದರೂ ದಿಗಂತಕ್ಕೆ ಕಟ್ಟಿದ ಬೆಳ್ಳಿಅಂಚು. ಪರ್ವತಗಳ ದೂರಕ್ಕೆ ಅನುಸಾರವಾಗಿ ಹಿಮವು ವಿಭಿನ್ನ ಶೇಡುಗಳಲ್ಲಿ ಗೋಚರಿಸುತ್ತದೆ. ಕೇದಾರನಾಥದಲ್ಲಿ ಹಿಮಪರ್ವತಗಳ ಮುಂದೆ ಕಟ್ಟಲಾದ ವೇದಿಕೆಯಂತೆ ನಮ್ಮ ಟೆಂಟುಗಳಿದ್ದವು. ಒಳಗಿದ್ದೇ ಕ್ಷಣಕ್ಕೊಂದು ರೀತಿ ಶಿಖರದ ವರ್ಣವೈವಿಧ್ಯ ಬದಲುವ ದೃಶ್ಯ ನೋಡಬಹುದಿತ್ತು. ಬದರಿಯಲ್ಲಿ ನಾವಿದ್ದ ಯೂತ್‌ಹಾಸ್ಟೆಲಿನ ಕೋಣೆಯಿಂದ ದಿಗಂತದಲ್ಲಿ ನೆಟ್ಟ ಬೆಳ್ಳಿಶೂಲದಂತಿದ್ದ ನೀಲಕಂಠ ಪರ್ವತವು ಮೂತಿಯನ್ನು ತೋರಿಸುತ್ತ, ತಾಕತ್ತಿದ್ದರೆ ಹತ್ತುವೆಯಾ ಎಂದು ಕೆಣಕುತ್ತಿತ್ತು.



ಹಿಮಪರ್ವತಗಳಿಂದ
ಹರಿದು ಬರುವ ನದಿ



ಕೇದಾರನಾಥ
ಹಾದಿಯಲ್ಲಿ...